**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**
ವಿಧಾನ ಸೌಧ, ಬೆಂಗಳೂರು– 560 001
ದೂರವಾಣಿ ಸಂ: 080–22359562(ಶಾಸಕರ ಭವನ)

# ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿರುವ ಸಸ್ಯಹಾರ ಉಪಹಾರ ಗೃಹವನ್ನು ನಡೆಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
https://eproc.karnataka.gov.in

## ಬಿಡ್ಡಿಂಗ್ ದಾಖಲಾತಿ – ದ್ವಿಲಕೋಟೆ ಪದ್ಧತಿ

**ಕಾರ್ಯದರ್ಶಿ**
**ಕರ್ನಾಟಕ ವಿಧಾನ ಪರಿಷತ್ತು**
**ಬೆಂಗಳೂರು– 560 001**

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**
ವಿಧಾನ ಸೌಧ, ಬೆಂಗಳೂರು– 560 001
ದೂರವಾಣಿ ಸಂ: 080–22359562(ಶಾಸಕರ ಭವನ)

ಸಂಖ್ಯೆ: ಕವಿಪ/ಶಾಭ/900/ಸಹೊಟೆ/2022, ದಿ:24.11.2022

## <u>ಅಲ್ಪಾವಧಿ ಟೆಂಡರ್ ಅಧಿಸೂಚನೆ</u>

ಶಾಸಕರ ಭವನದ ಆವರಣದಲ್ಲಿನ ಸಸ್ಯಹಾರ ಉಪಹಾರ ಗೃಹವನ್ನು ನಡೆಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಬಿಡ್ ದಾಖಲಾತಿಗಳು ದಿನಾಂಕ:24.11.2022 ರಿಂದ 07.12.2022 ರವರೆಗೆ https://eproc.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್‌ದಾರರು ಬಿಡ್ ದಾಖಲಾತಿಗಳನ್ನು ಅದರಲ್ಲಿ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಂಡು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಆನ್‌ಲೈನ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು **ಕೊನೆಯ ದಿನಾಂಕ:07.12.2022, ಸಂಜೆ :5.30 ಗಂಟೆ.**

ಬಿಡ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಸ್ವೀಕರಿಸುವ/ ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಅವಶ್ಯವಿದ್ದಲ್ಲಿ, ಆಸಕ್ತ ಬಿಡ್‌ದಾರರು ಶಾಸಕರ ಭವನದ ಆವರಣದಲ್ಲಿರುವ ಹೋಟೆಲ್ ಕಟ್ಟಡದ ಆವರಣವನ್ನು ಬಿಡ್ ಸಲ್ಲಿಸುವ ಪೂರ್ವದಲ್ಲಿ ಸ್ಥಳ ಭೇಟಿ ಮಾಡಬಹುದು.

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

ವಿಧಾನ ಸೌಧ, ಬೆಂಗಳೂರು– 560 001

## ಕಾರ್ಯಕ್ರಮಗಳ ವೇಳಾಪಟ್ಟಿ

**ಟೆಂಡರ್ ಅಧಿಸೂಚನೆ ಸಂ:ಕವಿಪ/ಶಾಭ/900/ಸಹೊಟೆ/2022**, ದಿ:24.11.2022

| ಕ್ರ.ಸಂ | ಕಾರ್ಯಕ್ರಮಗಳು | ದಿನಾಂಕ ಮತ್ತು ಸಮಯ |
|---|---|---|
| 1. | ಬಿಡ್‌ದಾರರು ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ | ದಿ: 07.12.2022**, ಸಂಜೆ 5.00ಗಂಟೆ** |
| 2. | ಬಿಡ್‌ದಾರರೊಂದಿಗಿನ ಪೂರ್ವಭಾವಿ ಸಭೆ | ದಿ: 01.12.2022,<br>ಮಧ್ಯಾಹ್ನ: 03–00 ಗಂಟೆ.<br>ಸ್ಥಳ: ಸಮ್ಮೇಳನಾ ಸಭಾಂಗಣ,<br>4ನೇ ಮಹಡಿ, ಶಾಸಕರ ಭವನ–1,<br>ಬೆಂಗಳೂರು |
| 3. | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿ: 08.12.2022, 12–00 ಗಂಟೆ |
| 4. | ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿ: 12.12.2022, 12–00 ಗಂಟೆ |

**ಸಂಪರ್ಕಕ್ಕಾಗಿ ವಿಳಾಸ:**

ಕ್ಷೇತ್ರಾಧಿಕಾರಿ,
ಶಾಸಕರ ಭವನ,
ಬೆಂಗಳೂರು– 560 001
ದೂರವಾಣಿ: 080–22359562

**ಕರ್ನಾಟಕ ವಿಧಾನ ಪರಿಷತ್ತು**

ಸಂಖ್ಯೆ:ಕವಿಪ/ಶಾಭ/900/ಸಹೊಟೆ/2022

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ,
ಬೆಂಗಳೂರು – 560 001, ದಿನಾಂಕ:24.11.2022.

## ಅಲ್ಪಾವಧಿ ಟೆಂಡರ್ ಅಧಿಸೂಚನೆ

ವಿಷಯ: ಶಾಸಕರ ಭವನದ ಆವರಣದಲ್ಲಿರುವ ಸಸ್ಯಾಹಾರಿ ಉಪಾಹಾರ ಗೃಹವನ್ನು ನಡೆಸಲು ಗುತ್ತಿಗೆ ನೀಡುವ ಬಗ್ಗೆ.

*****

### 1) ಕೆಲಸದ ಉದ್ದೇಶ ಮತ್ತು ವ್ಯಾಪ್ತಿ:-

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೊಳಪಡುವ ಶಾಸಕರ ಭವನದಲ್ಲಿ ಸುಸಜ್ಜಿತ ಸಸ್ಯಾಹಾರ ಉಪಾಹಾರ ಮಂದಿರವು ಇದ್ದು, ಇದನ್ನು ನಡೆಸುವ ಮೂಲಕ ವಿಧಾನ ಮಂಡಲದ ಮಾನ್ಯ ಸದಸ್ಯರುಗಳಿಗೆ, ಸಚಿವಾಲಯದ ಸಿಬ್ಬಂದಿಗಳಿಗೆ, ಸಮಿತಿಗಳ ಸಭೆಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥವನ್ನು ಒದಗಿಸುವುದು.

ವರ್ಷದ ಎಲ್ಲಾ ದಿನಗಳಲ್ಲಿ ಬೆಳಿಗ್ಗೆ 6.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ಉಪಾಹಾರ ಗೃಹವನ್ನು ತೆರೆದಿರಬೇಕು.

### 2) ಗುತ್ತಿಗೆ ನೀಡಲಾಗುವ ಟೆಂಡರ್‌ನ ಅವಧಿ:-

ಶಾಸಕರ ಭವನದಲ್ಲಿನ ಸಸ್ಯಾಹಾರಿ ಉಪಾಹಾರ ಮಂದಿರದ ಗುತ್ತಿಗೆ ಅವಧಿಯು ಕಾರ್ಯಾದೇಶದಲ್ಲಿ ನಿಗಧಿ ಪಡಿಸಿದ ದಿನಾಂಕದಿಂದ ಮುಂದಿನ ಮೂರು ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುವುದು. ವಿಧಾನ ಪರಿಷತ್ತಿನ ಸಚಿವಾಲಯದ ಸಕ್ಷಮ ಪ್ರಾಧಿಕಾರವು ತೀರ್ಮಾನಿಸಿದಲ್ಲಿ, ಸದರಿ ಅವಧಿ ಮುಗಿದ ನಂತರ ಮರು ಟೆಂಡರ್ ಪ್ರಕ್ರಿಯೆ ಮೂಲಕ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡುವವರೆಗೆ ಮುಂದುವರೆಸಬಹುದು.

**3) ಇ.ಎಂ.ಡಿ ಮತ್ತು ಇತರೆ ಮೊತ್ತ:–**

3.1 ಶಾಸಕರ ಭವನದ ಕಟ್ಟಡದಲ್ಲಿ ಉಪಾಹಾರ ಮಂದಿರವನ್ನು ನಡೆಸುವ ಗುತ್ತಿಗೆ ಪಡೆಯುವ ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ವ್ಯಕ್ತಿ/ಸಂಸ್ಥೆಯು ರೂ.1.10ಲಕ್ಷ (ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು ಮಾತ್ರ) ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಿರುವ ರೀತ್ಯಾ ಪಾವತಿಸತಕ್ಕದ್ದು. ಈ ಇ.ಎಂ.ಡಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

3.2 ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಶಸ್ವಿ ಬಿಡ್‌ದಾರರನ್ನು ಹೊರತುಪಡಿಸಿ ಉಳಿದ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಇ–ಪಾವತಿ ಮೂಲಕವೇ ಇ–ಪ್ರಕ್ಯೂರ್‌ಮೆಂಟ್ ವತಿಯಿಂದ ಮರು ಪಾವತಿಸಲಾಗುವುದು.

3.3 ಯಶಸ್ವಿ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ವಿಧಾನ ಪರಿಷತ್ ಸಚಿವಾಲಯಕ್ಕೆ ಬಡ್ಡಿರಹಿತ ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಪಾವತಿಸಿದ ನಂತರ ಹಿಂತಿರುಗಿಸಲಾಗುವುದು.

3.4 ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚಿಸುವವರು ಇ.ಎಂ.ಡಿ ಜೊತೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವತಿಯಿಂದ ವಿಧಿಸುವ ಇತರೆ ಮೊತ್ತವನ್ನು ಪಾವತಿಸಲು ಬದ್ಧರಿರತಕ್ಕದ್ದು.

**4) ಟೆಂಡರ್ ಸಲ್ಲಿಸುವಿಕೆ:–**

4.1 ಆಸಕ್ತ ಬಿಡ್‌ದಾರರು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ಟೆಂಡರ್ ಸಲ್ಲಿಸುವುದು

4.2 ಎಲ್ಲಾ ದಾಖಲೆಗಳ ಪ್ರತೀ ಪುಟಕ್ಕೆ, ಬಿಡ್‌ದಾರರು ಅಥವಾ ಸಂಸ್ಥೆಯಾಗಿದ್ದಲ್ಲಿ, ಅಧಿಕೃತವಾಗಿ ಸಹಿ ಮಾಡಲು ಅಧಿಕಾರ ಹೊಂದಿರುವವರು ಸಹಿ ಮಾಡಿರತಕ್ಕದ್ದು.

4.3 ಟೆಂಡರ್‌ನ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

5) **ಟೆಂಡರ್ ಜೊತೆ ಸಲ್ಲಿಸಬೇಕಾದ ದಾಖಲೆಗಳು:-**

5.1 ಟೆಂಡರ್ ದಾಖಲೆಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬೇಕಾಗಿದ್ದು, ತಾಂತ್ರಿಕ ಬಿಡ್ (Technical Bid) ಮತ್ತು ಆರ್ಥಿಕ ಬಿಡ್ (Financial Bid)ಗೆ ಸಂಬಂಧಿಸಿದ ದಾಖಲೆಗಳನ್ನು ಆಯಾ ಅಂಕಣದಲ್ಲಿ ಅಪ್‌ಲೋಡ್ ಮಾಡಿ ಬಿಡ್‌ನ್ನು ದಾಖಲಿಸತಕ್ಕದ್ದು.

5.2 ತಾಂತ್ರಿಕ ಬಿಡ್ ದಾಖಲೆ ಸಲ್ಲಿಸುವ ಭಾಗದಲ್ಲಿ ಆರ್ಥಿಕ ಬಿಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿ ಸಲ್ಲಿಕೆಯಾಗಿದಲ್ಲಿ, ನಿಗಧಿತ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮತ್ತು ಅಪೂರ್ಣ ಮಾಹಿತಿಯುಳ್ಳ ಬಿಡ್‌ಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಬಿಡ್‌ಗಳನ್ನು ಅನರ್ಹವೆಂದು ಪರಿಗಣಿಸಲಾಗುವುದು.

6) **ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆಯಲು ಈ ಕೆಳಕಂಡ ಮೂಲ/ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು:-**

6.1 ರಾಜ್ಯದ ಅಧಿಕೃತ ವಿಶ್ವವಿದ್ಯಾಲಯದಿಂದ ಬ್ಯಾಚಲರ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಪದವಿಯನ್ನು ಹೊಂದಿರುವ ದಾಖಲೆ.

6.2 ನಿಗಧಿತ ಇ.ಎಂ.ಡಿ. ಮೊತ್ತವನ್ನು ಪಾವತಿಸಿರುವ ದಾಖಲೆ.

6.3 ಉಪಾಹಾರ ಗೃಹಗಳನ್ನು ನಡೆಸಿರುವುದಕ್ಕೆ ಸಂಬಂಧಿಸಿದಂತೆ 3 ವರ್ಷಗಳ ಅನುಭವ ಹೊಂದಿರುವ ಕುರಿತಾದ ದಾಖಲೆ.

6.4 ಪ್ರಸ್ತುತ ನಡೆಸುತ್ತಿರುವ ಉಪಾಹಾರ ಮಂದಿರ/ಹೋಟೆಲ್‌ಗಳ ಹೆಸರು, ವಿಳಾಸ, ಸಂಪರ್ಕ ವ್ಯಕ್ತಿಯ ವಿವರ ಹಾಗೂ ದೂರವಾಣಿ ಸಂಖ್ಯೆ ಒಳಗೊಂಡ ವಿವರಗಳುಳ್ಳ ತಃಖ್ತೆ ಮತ್ತು ಅವುಗಳಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳ ಪ್ರತಿ.

6.5 ಉಪಾಹಾರ ಗೃಹವನ್ನು ನಡೆಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಪ್ರಾಧಿಕಾರದ ವತಿಯಿಂದ ಪಡೆದಿರುವ ಪರವಾನಗಿ ದಾಖಲೆ.

6.6 ಹೊರ ರಾಜ್ಯದ ಅಥವಾ ಬೆಂಗಳೂರು ಹೊರತುಪಡಿಸಿದ ಸ್ಥಳಗಳಲ್ಲಿನ ಸಂಸ್ಥೆಗಳಾಗಿದ್ದಲ್ಲಿ ಆಯಾ ಸ್ಥಳೀಯ ಸಂಸ್ಥೆಗಳಿಂದ ಪಡೆದಿರುವ ಪರವಾನಗಿ ದಾಖಲೆಗಳನ್ನು ಸಲ್ಲಿಸುವುದು. ಮುಂದುವರೆದು, ಅಂತಹ ಸಂಸ್ಥೆಯು ಆಯ್ಕೆಗೊಂಡಲ್ಲಿ ಬಿ.ಬಿ.ಎಂ.ಪಿಯಿಂದ ಪರವಾನಗಿ ಪಡೆದು ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

6.7 ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಮಾಣ ಪತ್ರ (FSSAI Certificate)

6.8 ಗುತ್ತಿಗೆ ಕಾರ್ಮಿಕರ ಪರವಾನಗಿ ಸೇರಿದಂತೆ ಇ.ಎಸ್.ಐ, ಪಿ.ಎಫ್ ಹಾಗೂ ಜಿ.ಎಸ್.ಟಿಗೆ

ಸಂಬಂಧಪಟ್ಟಂತೆ ಆಯಾ ಸಕ್ಷಮ ಪ್ರಾಧಿಕಾರಗಳಿಂದ ಪಡೆದಿರುವ ನೋಂದಣಿ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಮತ್ತು ಕಳೆದ ಸಾಲಿನಲ್ಲಿ ಆಯಾ ಇಲಾಖೆಗೆ ಸಲ್ಲಿಸಿರುವ ರಿಟರ್ನ್ಸ್‌ಗಳ ಮತ್ತು ತೀರುವಳಿ ದೃಢೀಕೃತ (Clearance Certificate) ಪ್ರತಿಗಳು.

6.9 ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವ 2019-20, 2020-21 ಮತ್ತು 2021-22ನೇ ಸಾಲಿನ ರಿಟರ್ನ್ಸ್‌ಗಳ ದೃಢೀಕೃತ ಪ್ರತಿ.

6.10 ಬಿಡ್‌ದಾರರ/ಸಂಸ್ಥೆಯ ಪ್ಯಾನ್‌ಕಾರ್ಡ್ (PAN Card) ಪ್ರತಿ.

6.11 2019-20, 2020-21 ಮತ್ತು 2021-22 ಆರ್ಥಿಕ ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ವಾರ್ಷಿಕವಾಗಿ ಕನಿಷ್ಠ ರೂ.1,00,00,000/- (ಒಂದು ಕೋಟಿ ರೂಪಾಯಿಗಳ) ವಹಿವಾಟನ್ನು ನಡೆಸಿರುವುದನ್ನು ಖಾತ್ರಿ ಪಡಿಸುವ ದೃಢೀಕೃತ ದಾಖಲೆಗಳ ಪ್ರತಿ.

6.12 ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ದೃಢೀಕರಿಸಿರುವ ಕಳೆದ 03 ವರ್ಷಗಳ ಬ್ಯಾಲೆನ್ಸ್ ಶೀಟ್ ಪ್ರತಿ.

6.13 ಬಿಡ್‌ದಾರರು ಸಂಸ್ಥೆ/ ಪಾಲುದಾರ ಸಂಸ್ಥೆಯ ಪರವಾಗಿ ಬಿಡ್ ಸಲ್ಲಿಸುತ್ತಿದ್ದಲ್ಲಿ ಸದರಿ ಬಿಡ್ ಸಲ್ಲಿಸಲು ಆಯಾ ಸಂಸ್ಥೆಗಳಿಂದ ಪಡೆದಿರುವ ಅಧಿಕಾರ ಪತ್ರದ ದೃಡೀಕೃತ ಪ್ರತಿ.

6.14 ಕಳೆದ 5 ವರ್ಷಗಳಲ್ಲಿ ಬಿಡ್‌ದಾರರು ಅಥವಾ ಸಂಸ್ಥೆಯು ಕಪ್ಪುಪಟ್ಟಿಗೆ ಸೇರಿಲ್ಲ ಮತ್ತು ಸಲ್ಲಿಸಲಾಗುವ ಬಿಡ್‌ನ್ನು ಹಿಂಪಡೆಯುವುದಿಲ್ಲ ಎಂಬುದರ ಬಗ್ಗೆ ಸ್ವ-ದೃಢೀಕರಣ ಪತ್ರ.

7) **<u>ಆರ್ಥಿಕ ಬಿಡ್ ವಿಭಾಗದಲ್ಲಿ ಸಲ್ಲಿಸಬೇಕಾದ ದಾಖಲೆಗಳು:-</u>**

7.1 ಅನುಬಂಧ-1ರಲ್ಲಿ ನಮೂದಿಸಿರುವ ವಿವಿಧ ತಿಂಡಿ ತಿನಿಸುಗಳ ದರವನ್ನು ನಿರ್ದಿಷ್ಟಪಡಿಸಿರುವ ದರಕ್ಕಿಂತ ಕಡಿಮೆ ಮೊತ್ತವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಬೇಕು.

7.2 ನಮೂದಿಸಲಾಗುವ ದರವು ಜನ ಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಸೀಮಿತವಾಗಿದ್ದು, ಇತರೆ ಸಾರ್ವಜನಿಕರಿಗೆ ವಿಧಿಸಬಹುದಾದ ದರವನ್ನು ಸಚಿವಾಲಯದೊಂದಿಗೆ ಸಮಾಲೋಚಿಸಿ ನ್ಯಾಯಯುತವಾಗಿ ಕನಿಷ್ಠ ಹೆಚ್ಚಳದೊಂದಿಗೆ ನಿಗಧಿಪಡಿಸಲು ಅವಕಾಶವಿರುತ್ತದೆ.

7.3 ಗುತ್ತಿಗೆ ಅವಧಿ (ವಿಸ್ತರಣೆ/ನವೀಕರಣ ಅವಧಿ ಸೇರಿದಂತೆ) ಮುಗಿಯುವವರೆಗೆ ನಮೂದಿಸಲಾದ ದರಗಳಲ್ಲಿಯೇ ಆಹಾರ ಪದಾರ್ಥವನ್ನು ಪೂರೈಸಬೇಕು. ಆದರೆ

ಕಾಲಕಾಲಕ್ಕೆ ಶಾಸನಬದ್ಧ ತೆರಿಗೆ ಮತ್ತು ಇತರೆ ದರಗಳಲ್ಲಿ ವ್ಯತ್ಯಾಸದಲ್ಲಿ ಅದಕ್ಕನುಗುಣವಾಗಿ ದರ ಪರಿಷ್ಕರಣೆಗೆ ಪರಿಗಣಿಸಲಾಗುವುದು.

7.4 ನಮೂದಿಸಲಾದ ಆಹಾರ ಪದಾರ್ಥಗಳನ್ನು ಹೊರತುಪಡಿಸಿದ ಆಹಾರಗಳಿಗೆ ಸಚಿವಾಲಯದೊಂದಿಗೆ ಸಮಾಲೋಚಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ದರ ನಿಗಧಿ ಪಡಿಸಬಹುದು ಮತ್ತು ಸಕಾರಣಗಳಿದ್ದಲ್ಲಿ ಮಾತ್ರ ಅಂತಿಮಗೊಳಿಸಿದ ದರವನ್ನು ಸಹ ಇದೇ ಮಾದರಿಯಲ್ಲಿ ಪರಿಷ್ಕರಣೆ ಮಾಡಬಹುದು.

**8) <u>ಉಪಾಹಾರ ಮಂದಿರದ ಗುತ್ತಿಗೆಗೆ ಸಂಬಂಧಿಸಿದ ನಿಬಂಧನೆಗಳು:–</u>**

8.1 ಸದರಿ ಉಪಾಹಾರ ಮಂದಿರವನ್ನು 3 (ಮೂರು) ವರ್ಷದ ಅವಧಿಗೆ ಮಾತ್ರ ನಡೆಸಲು ಅನುಮತಿ ನೀಡಲಾಗುವುದು ಯಾವುದೇ ಹಂತದಲ್ಲಿ 30 ದಿನಗಳ ನೋಟೀಸ್‌ನ್ನು ನೀಡುವ ಮೂಲಕ ಈ ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಿಧಾನ ಪರಿಷತ್ತಿನ ಸಚಿವಾಲಯವು ಕಾಯ್ದಿರಿಸಿಕೊಂಡಿದೆ.

8.2 ರೂ.85,000/– (ಎಂಭತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮತ್ತು ಜಿಎಸ್‌ಟಿ ಶೇ.18ರಷ್ಟು ಸೇರಿದಂತೆ ಮಾಸಿಕ ಬಾಡಿಗೆಯಾಗಿ ನಿಗಧಿ ಪಡಿಸಿದೆ. ಸದರಿ ಬಾಡಿಗೆ ಮೊತ್ತವನ್ನು ಕರಾರಿನ ಅವಧಿಯಲ್ಲಿ ಪ್ರತಿ ವರ್ಷ ಶೇ.5 ರಂತೆ ಹೆಚ್ಚಿಸಲಾಗುವುದು.

8.3 ನಿಗಧಿ ಪಡಿಸಿರುವ ಮಾಸಿಕ ಬಾಡಿಗೆ ಮೊತ್ತವನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪ್ರತಿ ತಿಂಗಳ ವಿಳಂಬಕ್ಕೆ ಶೇ.5ರಷ್ಟು ದಂಡವನ್ನು ಹೆಚ್ಚುವರಿಯಾಗಿ ಪಾವತಿ ಮಾಡಬೇಕಾಗುತ್ತದೆ.

8.4 ಶಾಸಕರ ಭವನದ ಸಸ್ಯಾಹಾರಿ ಉಪಾಹಾರ ಮಂದಿರದ ವಿದ್ಯುತ್ ಮತ್ತು ನೀರಿನ ಬಿಲ್ಲನ್ನು ಗುತ್ತಿಗೆದಾರರೇ ತಪ್ಪದೇ ಪ್ರತಿ ತಿಂಗಳು ಆಯಾ ಸಂಸ್ಥೆಗಳಿಗೆ ಪಾವತಿ ಮಾಡತಕ್ಕದ್ದು.

8.5 ಶಾಸಕರ ಭವನದ ಸಸ್ಯಾಹಾರಿ ಉಪಾಹಾರ ಗೃಹದ ಒಟ್ಟು ವಿಸ್ತೀರ್ಣ 413.97 ಚದರ ಮೀಟರ್ ಇರುತ್ತದೆ. ಇದರೊಂದಿಗೆ ಹೋಟೆಲ್ ಕಾರ್ಮಿಕರು ತಂಗಲು ಇರುವ ಕೊಠಡಿಯನ್ನು ಮಾತ್ರ ಉಚಿತವಾಗಿ ಒದಗಿಸಲಾಗುವುದು. ಉಳಿದಂತೆ ಹೆಚ್ಚುವರಿಯಾಗಿ ಯಾವುದೇ ಕೊಠಡಿ ಅವಶ್ಯವಿದ್ದಲ್ಲಿ ಪಾವತಿ ಆಧಾರದ ಮೇಲೆ ಒದಗಿಸಲು ಪರಿಶೀಲಿಸಲಾಗುವುದು.

8.6 ಟೆಂಡರ್‌ದಾರರು ತಮ್ಮ ಟೆಂಡರ್‌ಗಳನ್ನು ಪೂರ್ಣ ಹೆಸರು ಮತ್ತು ಸಹಿಯೊಂದಿಗೆ

ಸಲ್ಲಿಸಬೇಕು. ಒಂದು ವೇಳೆ ಸಂಸ್ಥೆ/ ಪಾಲುದಾರ ಸಂಸ್ಥೆಯ ಪರವಾಗಿ ಸಲ್ಲಿಸುತ್ತಿದ್ದಲ್ಲಿ ಅಧಿಕೃತವಾಗಿ ಸಹಿ ಮಾಡಲು ಅಧಿಕಾರ ಹೊಂದಿರುವವರು ಸೂಕ್ತ ದಾಖಲೆಯೊಂದಿಗೆ ಹೆಸರು ನಮೂದಿಸಿ, ಸಹಿ ಮಾಡಿ ಸಲ್ಲಿಸಬೇಕು.

8.7 ಟೆಂಡರ್‌ದಾರರು ತಮ್ಮ ವಾಸಸ್ಥಳ, ಅಂಚೆ ವಿಳಾಸ, ಇ–ಮೇಲ್ ಹಾಗೂ ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಟೆಂಡರ್‌ನಲ್ಲಿ ನಮೂದಿಸತಕ್ಕದ್ದು.

8.8 ಪ್ರತಿಯೊಂದು ಆಹಾರ ಪದಾರ್ಥಗಳಿಗೆ ನಿಗಧಿ ಪಡಿಸಲಾಗುವ ದರ ಮತ್ತು ಪ್ರಮಾಣವನ್ನು ಎಲ್ಲರಿಗೂ ತಿಳಿಯುವಂತೆ ಹೋಟೆಲ್ ಆವರಣದಲ್ಲಿ ಪ್ರದರ್ಶಿಸಬೇಕು. ಬಿಡ್ ಸಮಯದಲ್ಲಿ ನಮೂದಾಗದೆ ಇರುವ ಇತರೆ ಯಾವುದೇ ಆಹಾರ ಪದಾರ್ಥದ ದರವನ್ನು ವಿಧಾನ ಪರಿಷತ್ತಿನ ಸಚಿವಾಲಯದಿಂದ ಕಡ್ಡಾಯವಾಗಿ ಅನುಮೋದನೆ ಪಡೆದು ನಿಗಧಿ ಪಡಿಸತಕ್ಕದ್ದು.

8.9 ಗುತ್ತಿಗೆ ಅವಧಿಯಲ್ಲಿ ಯಾವುದೇ ವ್ಯಾಜ್ಯ ಉಂಟಾದಲ್ಲಿ ಅದನ್ನು ಪರಿಹರಿಸಿಕೊಳ್ಳಲು ಬೆಂಗಳೂರಿನಲ್ಲಿರುವ ನ್ಯಾಯಾಲಯಗಳ ವ್ಯಾಪ್ತಿಗೆ ಸೀಮಿತವಾಗಿರುತ್ತದೆ.

8.10 ಉಪಾಹಾರ ಮಂದಿರವನ್ನು ಸ್ವಚ್ಛವಾಗಿ ಇಡುವುದಲ್ಲದೇ ಸೋಂಕು, ರೋಗ ಹರಡದಂತೆ ನೈರ್ಮಲ್ಯೀಕರಣ ಕ್ರಮಕೈಗೊಳ್ಳುವುದು ಹಾಗೂ ಇಲಿ, ನೊಣ, ಸೊಳ್ಳೆ ಇತ್ಯಾದಿಗಳ ಸಮಸ್ಯೆಗಳು ಉಂಟಾಗದಂತೆ ಕಾಲಕಾಲಕ್ಕೆ ಸೂಕ್ತ ಔಷಧಿಯನ್ನು ಸಿಂಪಡಿಸಿಕೊಂಡು ಉಪಾಹಾರ ಗೃಹ ಹಾಗೂ ಸುತ್ತಮುತ್ತಲಿನ ಆವರಣವನ್ನು ಗುತ್ತಿಗೆದಾರರು ಸ್ವಚ್ಛವಾಗಿಟ್ಟು ಕೊಳ್ಳತಕ್ಕದ್ದು.

8.11 ಉಪಾಹಾರ ಗೃಹದಲ್ಲಿ ಸರಬರಾಜು ಮಾಡಲಾಗುವ ತಿಂಡಿ–ತಿನಿಸು, ಆಹಾರ ಪದಾರ್ಥಗಳ ಸೇವನೆಯಿಂದ ಗ್ರಾಹಕರು ಅಸ್ವಸ್ಥರಾದರೆ ಮತ್ತು ಅದರಿಂದ ಉಂಟಾಗುವ ಪರಿಣಾಮಗಳಿಗೆ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ತಿಂಡಿ–ತಿನಸುಗಳಿಗೆ ಆರೋಗ್ಯಕ್ಕೆ ಮಾರಕವಾಗುವ ಯಾವುದೇ ರಾಸಾಯನಿಕ ಬಣ್ಣ ಹಾಗೂ ಪದಾರ್ಥಗಳನ್ನು ಬಳಸಕೂಡದು.

8.12 ಉಪಾಹಾರ ಗೃಹ ನಡೆಸುವ ವ್ಯಕ್ತಿ/ಸಂಸ್ಥೆಯು ಯಾವುದೇ ಅನಧಿಕೃತ ಚಟುವಟಿಕೆ, ಅವ್ಯವಸ್ಥಿತ ನಿರ್ವಹಣೆ ಅಥವಾ ಯಾವುದೇ ಅವಘಡವಾದಲ್ಲಿ ಅದರ ಜವಾಬ್ದಾರಿಯನ್ನು ಹೊತ್ತು ತನ್ನ ಸಿಬ್ಬಂದಿಗಳಿಗಾಗಲಿ ಅಥವಾ ಗ್ರಾಹಕರಿಗಾಗಲಿ ಸೂಕ್ತ ಪರಿಹಾರ ನೀಡುವುದಕ್ಕೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

8.13 ವಿಧಾನ ಪರಿಷತ್ತಿನ ಶಾಸಕರ ಭವನದ ಸಸ್ಯಾಹಾರಿ ಉಪಾಹಾರ ಗೃಹದಲ್ಲಿ ಅಳವಡಿಸಲಾಗಿರುವ ಉಪಕರಣಗಳು, ಕುರ್ಚಿ ಮತ್ತು ಮೇಜುಗಳ ವಿವರಗಳನ್ನು **ಅನುಬಂಧ–2ರಲ್ಲಿ** ನಮೂದಿಸಿದ್ದು, ಅವುಗಳನ್ನು ಹೇಗಿದೆಯೋ ಹಾಗೆ ಒದಗಿಸಲಾಗುವುದು. ಅವುಗಳನ್ನು ಹೊರತುಪಡಿಸಿ ಇತರೆ ಯಾವುದೇ ಉಪಕರಣ, ಪರಿಕರಗಳನ್ನು ಯಶಸ್ವಿ ಬಿಡ್‌ದಾರರೆ ತಮ್ಮ ಸ್ವಂತ ಖರ್ಚಿನಲ್ಲಿ ಪಡೆಯಬಹುದು. ಜೊತೆಗೆ ಪೂರೈಸಿರುವ ವಸ್ತುಗಳ ನಿರ್ವಹಣೆಯನ್ನು ಸಹ ಯಶಸ್ವಿ ಬಿಡ್‌ದಾರರೆ ಮಾಡಿಕೊಳ್ಳತಕ್ಕದ್ದು.

8.14 ಯಶಸ್ವಿ ಟೆಂಡರ್‌ದಾರರು ಉಪಾಹಾರ ಗೃಹ ಮತ್ತು ಅದರ ಆವರಣದಲ್ಲಿ ಇನ್ಯಾವುದೇ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವಂತಿಲ್ಲ.

8.15 ಯಶಸ್ವಿ ಟೆಂಡರ್‌ದಾರರು ಯಾವ ಕಾರಣಕ್ಕೂ ತಾವು ಗುತ್ತಿಗೆ ಪಡೆದ ಉಪಾಹಾರ ಮಂದಿರವನ್ನು ಉಪ ಗುತ್ತಿಗೆ ನೀಡುವುದಾಗಲಿ, ಬೇರೆಯವರಿಗೆ ವರ್ಗಾಯಿಸುವುದಾಗಲಿ ಮಾಡುವಂತಿಲ್ಲ.

8.16 ಉಪಾಹಾರ ಗೃಹಕ್ಕಾಗಿ ಖರೀದಿಸುವ ದಿನಸಿ ಪದಾರ್ಥಗಳು ಹಾಗೂ ತರಕಾರಿಗಳ ಗುಣಮಟ್ಟ ಸೇರಿದಂತೆ ಆಹಾರ ಪದಾರ್ಥಗಳ ಗುಣಮಟ್ಟವನ್ನು ಗುತ್ತಿಗೆದಾರರೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಅವಶ್ಯವಿದ್ದಲ್ಲಿ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳು ಗುಣಮಟ್ಟದ ಬಗ್ಗೆ ಸೂಕ್ತ ಪರೀಕ್ಷೆಗಳನ್ನು ಮಾಡಿಸಲಿದ್ದು, ಸದರಿ ಪರೀಕ್ಷೆಗಳಿಗೆ ತಗಲುವ ವೆಚ್ಚವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು.

8.17 ಉಪಾಹಾರ ಗೃಹದಲ್ಲಿ ಸರಬರಾಜು ಮಾಡುವ ತಿಂಡಿ/ತಿನಿಸುಗಳ ಗುಣಮಟ್ಟ ಹಾಗೂ ಆಹಾರ ಸರಬರಾಜು ಮಾಡುವ ಸಿಬ್ಬಂದಿಗಳ ಸ್ವಚ್ಛತೆಗೆ ಸಂಬಂಧಿಸಿದಂತೆ ಸಚಿವಾಲಯದ ಅಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲನೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಅಂತಹ ಸಂದರ್ಭದಲ್ಲಿ ನೀಡಲಾಗುವ ಸಲಹೆ, ನಿರ್ದೇಶನಗಳನ್ನು ಪಾಲಿಸಲು ಗುತ್ತಿಗೆದಾರರು ಬದ್ದರಿರತಕ್ಕದ್ದು.

8.18 ಶುದ್ಧವಾದ ಕುಡಿಯುವ ನೀರು/ಬಿಸಿ ನೀರನ್ನು ಉಚಿತವಾಗಿ ಗ್ರಾಹಕರಿಗೆ ಒದಗಿಸಬೇಕು.

8.19 ಉಪಾಹಾರ ಗೃಹವನ್ನು ನಿರಂತರವಾಗಿ ಶುಚಿಗೊಳಿಸಬೇಕು ಹಾಗೂ ಇದರ ಮೇಲುಸ್ತುವಾರಿಯನ್ನು ಮೇಲ್ವಿಚಾರಕರು ಸೂಕ್ತವಾಗಿ ನಿರ್ವಹಿಸತಕ್ಕದ್ದು.

8.20 ಉಪಾಹಾರ ಗೃಹಗಳಲ್ಲಿ ಉಪಯೋಗಿಸುವ ಲೋಟ, ಪಾತ್ರೆ ಮುಂತಾದ ಪರಿಕರಗಳನ್ನು ಬಿಸಿ ನೀರಿನಲ್ಲಿ ಸ್ವಚ್ಛಗೊಳಿಸಬೇಕು.

8.21 ಉಪಾಹಾರ ಮಂದಿರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ನಿರ್ದಿಷ್ಠ ಸಮವಸ್ತ್ರವನ್ನು ಹಾಗೂ ಅಡುಗೆ ಮನೆ, ವಿತರಣೆ ಕೌಂಟರ್‌ಗಳಲ್ಲಿ ಕಾರ್ಯನಿರ್ವಹಿಸುವವರು ಸಮವಸ್ತ್ರದೊಂದಿಗೆ ತಲೆ ಮತ್ತು ಕೈಗಳಿಗೆ ಅವಶ್ಯ ಸುರಕ್ಷಾ ಕವಚಗಳನ್ನು ಹಾಕಿಕೊಳ್ಳತಕ್ಕದ್ದು.

8.22 ಅದೇ ರೀತಿ ಸಿಬ್ಬಂದಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು ಮತ್ತು ಕಾರ್ಮಿಕ ಇಲಾಖೆಯ ನಿಯಮಾವಳಿ ಪ್ರಕಾರ ಅವರುಗಳಿಗೆ ನೀಡಬೇಕಾದ ಎಲ್ಲಾ ಸವಲತ್ತುಗಳನ್ನು ನೀಡಲು ಗುತ್ತಿಗೆದಾರರು ಬದ್ಧರಿರತಕ್ಕದ್ದು.

8.23 ಉಪಾಹಾರ ಗೃಹದ ಸಿಬ್ಬಂದಿಗಳು ಮಾನ್ಯ ಶಾಸಕರುಗಳೊಂದಿಗೆ ಮತ್ತು ಗ್ರಾಹಕರೊಂದಿಗೆ ಸೌಜನ್ಯಯುತವಾಗಿ ವ್ಯವಹರಿಸುವಂತೆ ಸೂಕ್ತ ತಿಳುವಳಿಕೆ ನೀಡತಕ್ಕದ್ದು.

8.24 ಉಪಾಹಾರ ಗೃಹದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಬಿ.ಬಿ.ಎಂ.ಪಿ ನಿಯಮಾವಳಿ ರೀತ್ಯಾ ವಿಲೇ ಮಾಡಬೇಕು.

8.25 ಟೆಂಡರ್ ದಾಖಲೆಗಳಲ್ಲಿನ ಷರತ್ತು ಮತ್ತು ನಿಬಂಧನೆಗಳ ಕುರಿತು ಯಾವುದೇ ಗೊಂದಲಗಳಿದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಸಂಪರ್ಕ ವಿಳಾಸದ ಅಧಿಕಾರಿಯನ್ನು ಸಂಪರ್ಕಿಸಿ ಮೌಖಿಕವಾಗಿ ಅಥವಾ ಲಿಖಿತವಾಗಿ ಸ್ಪಷ್ಟೀಕರಣ ಪಡೆಯಬಹುದು. ಇದರಿಂದಾಗಿ ಟೆಂಡರ್ ದಾಖಲೆಗಳಲ್ಲಿ ಯಾವುದೇ ಬದಲಾವಣೆ ಅವಶ್ಯವಿದ್ದಲ್ಲಿ, **ಅಂತಹ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮತ್ತು ಸಚಿವಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.**

8.26 ಆಯ್ಕೆಯಾಗುವ ಯಶಸ್ವಿ ಬಿಡ್‌ದಾರರು ನಿಗಧಿತ ಸಮಯದೊಳಗೆ 10 ತಿಂಗಳ ಬಾಡಿಗೆ ಮೊತ್ತದ ಭದ್ರತಾ ಠೇವಣಿಯನ್ನು ಪಾವತಿಸಿ, ಒಪ್ಪಂದದ ಕರಾರನ್ನು ಸಹಿ ಮಾಡಿದ ದಿನಾಂಕದಿಂದ ಒಂದು ವಾರದೊಳಗಾಗಿ ಸಸ್ಯಾಹಾರಿ ಉಪಾಹಾರ ಗೃಹವನ್ನು ಪ್ರಾರಂಭಿಸತಕ್ಕದ್ದು. ತಪ್ಪಿದಲ್ಲಿ, ಪಾವತಿಸಿರುವ ಇ.ಎಂ.ಡಿ ಮೊತ್ತ/ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8.27 ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹಾಗೂ ಯಾವುದೇ ಒಂದು ನಿರ್ಧಿಷ್ಟ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಇವರು ಹೊಂದಿರುತ್ತಾರೆ.

8.28 ಟೆಂಡರ್ ವಿಷಯದಲ್ಲಿ ವಿವಾದವುಂಟಾದಲ್ಲಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನ ಸೌಧ, ಬೆಂಗಳೂರು, ಇವರ ತೀರ್ಮಾನವು ಅಂತಿಮವಾಗಿರುತ್ತದೆ.

8.29 ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಮೊದಲ ಬಾರಿಗೆ ಅವುಗಳನ್ನು ಸರಿಪಡಿಸಿಕೊಳ್ಳಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ಶುಚಿತ್ವ ಸೇರಿದಂತೆ ಆಹಾರದ ಗುಣಮಟ್ಟ ಕಾಯ್ದುಕೊಳ್ಳಲು ವಿಫಲರಾದಲ್ಲಿ ಮತ್ತು ಉಲ್ಲಂಘನೆಗಳು ಪುನರಾವರ್ತನೆ ಆದಲ್ಲಿ, ಗುತ್ತಿಗೆಯನ್ನು ರದ್ದುಪಡಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕಾರ್ಯದರ್ಶಿಯವರಿಗೆ ಸಂಪೂರ್ಣ ಅಧಿಕಾರವಿರುತ್ತದೆ.

8.30 ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು–560001 ಅಥವಾ ಕ್ಷೇತ್ರಾಧಿಕಾರಿಯವರ ಕಚೇರಿ, ಶಾಸಕರ ಭವನ, ಬೆಂಗಳೂರು, ಇವರನ್ನು ಕಚೇರಿಯಲ್ಲಿ ಕೆಲಸದ ದಿನಗಳಲ್ಲಿ ಸಂಪರ್ಕಿಸಬಹುದು.

8.31 ಯಶಸ್ವಿ ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸದರಿ ಉಪಾಹಾರ ಗೃಹವನ್ನು ನಡೆಸಲು ಅವಶ್ಯವಿರುವ ಎಲ್ಲಾ ಶಾಸನಬದ್ಧ ಅನುಮತಿ ಪತ್ರಗಳು, ಪರವಾನಗಿ ಇತ್ಯಾದಿಗಳನ್ನು ಪಡೆಯಬೇಕು.

## 9) <u>ಟೆಂಡರ್ ತೆರೆಯುವುದು:</u>

9.1 ಇ–ಪ್ರಕ್ಯೂರ್‌ಮೆಂಟ್ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿದ ದಿನಾಂಕದಂದು ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಸದರಿ ಬಿಡ್ ತೆರೆಯುವ ದಿನಾಂಕಗಳು ಸಾರ್ವತ್ರಿಕ ರಜಾ ದಿನವಾದಲ್ಲಿ ಮಾರನೆಯ ದಿನ ತೆರೆಯಲಾಗುವುದು.

9.2 ಅದೇ ರೀತಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ನಿಗಧಿತ ದಿನಾಂಕದಂದು ತೆರೆಯಲಾಗುವುದು.

## 10) <u>ಟೆಂಡರ್‌ಗಳ ಮೌಲ್ಯ ಮಾಪನ:–</u>

10.1 ನಿಗಧಿಪಡಿಸಿದ ದಿನಾಂಕದಂದು ತಾಂತ್ರಿಕ ಬಿಡ್ (Technical Bid) ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಟೆಂಡರ್‌ದಾರರ ಆರ್ಥಿಕ ಬಿಡ್ (Financial Bid) ಗಳನ್ನು ಮಾತ್ರ ತೆರೆಯಲಾಗುವುದು.

10.2 ಎಲ್ಲಾ ಷರತ್ತುಗಳನ್ನು ಪೂರೈಸಿ ಎಲ್ಲಾ ಅವಶ್ಯ ದಾಖಲೆಗಳನ್ನು ಸಲ್ಲಿಸಿರುವ ಅರ್ಹ ಬಿಡ್‌ದಾರರ ಹೆಸರುಗಳನ್ನು ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ತೀರ್ಮಾನಿಸಲಾಗುವುದು.

10.3 ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಬಿಡ್‌ದಾರರು ಹಾಲಿ ನಡೆಸುತ್ತಿರುವ ಉಪಾಹಾರ ಗೃಹ/ಹೋಟೆಲ್‌ಗಳ ಸ್ಥಳ ಪರಿಶೀಲನೆಯನ್ನು ಮಾತ್ರ ಕೈಗೊಂಡು ಅಲ್ಲಿನ ಸ್ವಚ್ಚತೆ, ಆಹಾರದ ಗುಣಮಟ್ಟ ಮತ್ತು ನಿರ್ವಹಣೆ ಕುರಿತು ಪರಿಶೀಲನಾ ಸಮಿತಿಯು ವರದಿ ಸಲ್ಲಿಸಲಿದೆ.

10.4 ನಿರ್ಧಿಷ್ಠ ದಿನಾಂಕದಂದು ತಾಂತ್ರಿಕವಾಗಿ ಅರ್ಹರಾದ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ತೆರೆದು ತಿಂಡಿ–ತಿನಿಸುಗಳ ಒಟ್ಟಾರೆ ದರವನ್ನು ಪರಿಗಣಿಸಿ ಬಿಡ್‌ದಾರರನ್ನು ಗುರುತಿಸಲಾಗುವುದು.

10.5 ಉಪಹಾರ ಮಂದಿರದ ಬಾಡಿಗೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಮೊತ್ತ ರೂ.85,000/–ಗಳಿಗಿಂತ ಹೆಚ್ಚಿನ ಬಾಡಿಗೆ ಮೊತ್ತವನ್ನು ನಮೂದಿಸಿರುವುದನ್ನು ಪರಿಗಣಿಸಲಾಗುವುದು ಹಾಗೂ ತಿಂಡಿ ತಿನಿಸುಗಳಿಗೆ ಅನುಬಂಧದಲ್ಲಿ ನಿಗದಿಪಡಿಸಿರುವ ದರಗಳಿಗಿಂತ ಕಡಿಮೆ ದರವನ್ನು ಬಿಡ್‌ಮಾಡಿದವರನ್ನು ಯಶಸ್ವಿ ಬಿಡ್‌ದಾರರೆಂದು ಗುರುತಿಸಲಾಗುವುದು.

10.6 ಟೆಂಡರ್ ಪರಿಶೀಲನಾ ಸಮಿತಿಯು ಆರ್ಥಿಕ ಬಿಡ್‌ಗಳ ಒಟ್ಟಾರೆ ಮೊತ್ತದೊಂದಿಗೆ ಸ್ಥಳ ಪರಿಶೀಲನಾ ವರದಿಯಲ್ಲಿನ ಅಂಶಗಳಾದ ಬಿಡ್‌ದಾರರ ಅನುಭವ, ಹಾಲಿ ನಡೆಸುತ್ತಿರುವ ಹೋಟೆಲ್/ಉಪಾಹಾರ ಗೃಹಗಳ ಶುಚಿತ್ವ, ಆಹಾರ ಗುಣಮಟ್ಟ ಇತ್ಯಾದಿ ಅಂಶಗಳನ್ನು ಸಹ ಪರಿಗಣಿಸಿ ಅರ್ಹ ಯಶಸ್ವಿ ಬಿಡ್‌ದಾರರ ಹೆಸರನ್ನು ಶಿಫಾರಸ್ಸು ಮಾಡುವುದು.

10.7 ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡಿ, ಲೆಟರ್ ಆಫ್ ಇಂಡೆಂಟ್‌ನ್ನು ಅಂತಹ ಯಶಸ್ವಿ ಬಿಡ್‌ದಾರರಿಗೆ ನೀಡಲಿದೆ.

10.8 ಕಳೆದ 3 ವರ್ಷಗಳಲ್ಲಿ ಬಿಡ್‌ದಾರರ/ ಸಂಸ್ಥೆಯ ವಿರುದ್ಧ ಶುಚಿತ್ವ ಅಥವಾ ಆಹಾರ ಗುಣಮಟ್ಟ ಕಾಯ್ದುಕೊಳ್ಳದ ಆರೋಪದಲ್ಲಿ ಸಕ್ಷಮ ಪ್ರಾಧಿಕಾರವು ಕ್ರಮಕೈಗೊಂಡಿದ್ದಲ್ಲಿ, ಸದರಿ ಅಂಶವನ್ನು ಸಹ ಮೌಲ್ಯಮಾಪನದ ಸಮಯದಲ್ಲಿ ಪರಿಗಣಿಸಲಾಗುವುದು

10.9 ಟೆಂಡರ್ ಪ್ರಕ್ರಿಯೆಯ ಮೇಲೆ ಪ್ರಭಾರ ಬೀರುವಂತಹ ಆಸೆ, ಆಮಿಷ, ಒತ್ತಡ ಇತ್ಯಾದಿ ಕ್ರಿಯೆಯಲ್ಲಿ ತೊಡಗುವ ಹಾಗೂ ಟೆಂಡರ್ ಉದ್ದೇಶವನ್ನು ವಿಫಲಗೊಳಿಸುವ ಭಾಗವಾಗಿ

ಆಹಾರ ಪದಾರ್ಥಗಳ ದರಗಳನ್ನು ಅವಾಸ್ತವಿಕವಾಗಿ ನಮೂದಿಸುವುದು ಸೇರಿದಂತೆ ಅನೈತಿಕ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗುವ ಬಿಡ್‌ದಾರರನ್ನು ಅನರ್ಹರೆಂದು ಪರಿಗಣಿಸಲಾಗುವುದು.

11. **ಟೆಂಡರ್ ಅವಾರ್ಡ್ ಮಾಡುವುದು:-**

11.1 ಲೆಟರ್ ಆಫ್ ಇಂಡೆಂಟ್ ಪಡೆದ ಯಶಸ್ವಿ ಬಿಡ್‌ದಾರರು, ಅದನ್ನು ಸ್ವೀಕರಿಸಿದ 10 ದಿನಗಳೊಳಗೆ ಬಡ್ಡಿರಹಿತ ಭದ್ರತಾ ಠೇವಣಿ ಮೊತ್ತವನ್ನು ಸಚಿವಾಲಯಕ್ಕೆ ಪಾವತಿಸುವ ಮೂಲಕ ಒಪ್ಪಿಗೆಯನ್ನು ಸೂಚಿಸಬೇಕು.

11.2 ಅದರಂತೆ, ಬಾಡಿಗೆ ಕರಾರು ಮಾಡಿಕೊಂಡು ಉಪಾಹಾರ ಗೃಹವನ್ನು ಕಾರ್ಯಾರಂಭ ಮಾಡುವ ಬಗ್ಗೆ ಕಾರ್ಯಾದೇಶ ನೀಡಲಾಗುವುದು. ತದನಂತರ ನಿಗದಿತ ಮೌಲ್ಯದ ಛಾಪಾಕಾಗದಲ್ಲಿ ಒಪ್ಪಂದದ ಕರಾರಿಗೆ ಸಹಿ ಮಾಡಬೇಕು. ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರವೇ ಯಶಸ್ವಿ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಹಿಂತಿರುಗಿಸಲಾಗುವುದು.

11.3 ಯಾವುದೇ ಹಂತದಲ್ಲಿ ಒಪ್ಪಂದದ ಕರಾರನ್ನು ಸಹಿ ಮಾಡಿ ಸಲ್ಲಿಸಲು ವಿಫಲರಾದಲ್ಲಿ ಅಥವಾ ಉಪಾಹಾರ ಗೃಹವನ್ನು ಕಾರ್ಯಾರಂಭ ಮಾಡಲು ವಿಫಲರಾದಲ್ಲಿ ಬಿಡ್‌ದಾರರು ಪಾವತಿಸಿರುವ ಇ.ಎಂ.ಡಿ/ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ–1**

**ಉಪಾಹಾರ ಗೃಹದಲ್ಲಿ ಸಿದ್ಧಪಡಿಸಿ ಪೂರೈಸುವ ಆಹಾರ ಪದಾರ್ಥಗಳಿಗೆ ಬಿಡ್ ದಾಖಲಿಸಬೇಕಾದ ದರ ವಿವರ**

| ಕ್ರ.ಸಂ | ಆಹಾರ ಪದಾರ್ಥಗಳ ವಿವರ | ಪ್ರಮಾಣ/ತೂಕ | ಮಾನ್ಯ ಸದಸ್ಯರು & ಸಿಬ್ಬಂದಿಗಳಿಗೆ ನಿಗಧಿಪಡಿಸಿರುವ ಗರಿಷ್ಠ ಮೊತ್ತ (ರೂ.ಗಳಲ್ಲಿ) | ಮಾನ್ಯ ಸದಸ್ಯರು & ಸಿಬ್ಬಂದಿಗಳಿಗೆ ನಮೂದಿಸಬೇಕಾದ ಬಿಡ್ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1. | ದಕ್ಷಿಣ ಭಾರತ ಪ್ಲೇಟ್ ಊಟ | 1 ಸಂಖ್ಯೆ | 60.00 | |
| 2. | ಉತ್ತರ ಭಾರತ ಪ್ಲೇಟ್ ಊಟ | 1 ಸಂಖ್ಯೆ | 60.00 | |
| 3. | ಅನ್ನ ಸಾಂಬಾರ್ | 200 ಗ್ರಾಂ | 40.00 | |
| 4. | ಖಾರಾ ಬಾತ್ | 100 ಗ್ರಾಂ | 27.00 | |
| 5. | ಕೇಸರಿ ಬಾತ್ | 100 ಗ್ರಾಂ | 27.00 | |
| 6. | ಚೌಚೌ ಬಾತ್ | 200 ಗ್ರಾಂ | 50.00 | |
| 7. | ಇಡ್ಲಿ– 2ಸಂಖ್ಯೆ | 100 ಗ್ರಾಂ ತಲಾ | 30.00 | |
| 8. | ತಟ್ಟೇ ಇಡ್ಲಿ– 1 ಸಂಖ್ಯೆ | 150 ಗ್ರಾಂ | 25.00 | |
| 9. | ರವೆ ಇಡ್ಲಿ– 1 ಸಂಖ್ಯೆ | 100 ಗ್ರಾಂ | 27.00 | |
| 10. | ಉದ್ದಿನ ವಡೆ | 50 ಗ್ರಾಂ | 30.00 | |
| 11. | ಮಸಾಲ ವಡೆ/ ಮದ್ದೂರು ವಡೆ | 50 ಗ್ರಾಂ | 30.00 | |
| 12. | ಮಸಾಲೆ ದೋಸೆ/ ಸೆಟ್‌ದೋಸೆ | 150 ಗ್ರಾಂ | 50.00 | |
| 13. | ಪ್ಲೇನ್‌ದೋಸೆ | | 40.00 | |
| 14. | ಈರುಳ್ಳಿ ದೋಸೆ/ ರವಾದೋಸೆ | 150 ಗ್ರಾಂ | 50.00 | |
| 15. | ಪುಳಿಯೋಗರೆ/ ವಾಂಗಿ ಬಾತ್/ ಚಿತ್ರಾನ್ನ / ಬಿಸಿ ಬೇಳೆ ಬಾತ್/ ಶಾವಿಗೆ ಬಾತ್ | 150 ಗ್ರಾಂ | 40.00 | |
| 16. | ವೆಜ್ ಪಲಾವ್/ ಖಾರಾ ಪೊಂಗಲ್/ ಮೆಂತ್ಯ ಬಾತ್/ ರೈಸ್ ಬಾತ್ | 200 ಗ್ರಾಂ | 40.00 | |
| 17. | ಅವಲಕ್ಕಿ ಬಾತ್ | 100 ಗ್ರಾಂ | 35.00 | |
| 18. | ಮೊಸರನ್ನ | 200 ಗ್ರಾಂ | 35.00 | |
| 19. | ಪಕೋಡ | 75 ಗ್ರಾಂ | 25.00 | |
| 20. | ಬಜ್ಜಿ/ ಬೋಂಡ | 75 ಗ್ರಾಂ | 25.00 | |
| 21. | ಕಾಫಿ/ ಟೀ / ಹಾಲು | 100 ಎಂ.ಎಲ್ | 15.00 | |
| 22. | ಬಾದಾಮಿ ಹಾಲು/ ಬೋರ್ನ್‌ವೀಟಾ/ ಹಾರ್ಲಿಕ್ಸ್ | 100 ಎಂ.ಎಲ್ | 20.00 | |
| 23. | ಪೂರಿ ಸಾಗೂ | 130 ಗ್ರಾಂ | 40.00 | |
| 24. | ಚಪಾತಿ | 2 ಸಂಖ್ಯೆ | 26.00 | |
| 25. | ರೋಟಿಕರಿ | 200 ಗ್ರಾಂ | 34.00 | |

| | | | | |
|---|---|---|---|---|
| 26. | ಸ್ಯಾಂಡ್‌ವಿಚ್ | 1ಜೊತೆ | 35.00 | |
| 27. | ಕಟ್ಲೇಟ್ | 80 ಗ್ರಾಂ | 25.00 | |
| 28. | ಬ್ರೆಡ್ ಬಟರ್‌ಜಾಮ್ | 2 ಸೆಟ್ | 30.00 | |
| 29. | ಫ್ರೈಡ್‌ರೈಸ್ | 200 ಗ್ರಾಂ | 35.00 | |
| 30. | ಗೋಬಿ ಮಂಚೂರಿ | 100 ಗ್ರಾಂ | 25.00 | |
| 31. | ಕ್ಯಾಶಿವ್‌ನಟ್ ಪಕೋಡ | 80 ಗ್ರಾಂ | 30.00 | |
| 32. | ಟಮೋಟೊ ಸೂಪ್ | 100 ಎಂ.ಎಲ್ | 35.00 | |
| 33. | ಫ್ರೂಟ್ ಜ್ಯೂಸ್ | 100 ಎಂ.ಎಲ್ | 50.00 | |
| 34. | ಬೆಂಗಾಲಿ ಸ್ವೀಟ್ಸ್ | 45 ಗ್ರಾಂ | 35.00 | |
| 35. | ಸೋನ್‌ಪಪ್ಪಡಿ | 50 ಗ್ರಾಂ | 35.00 | |
| 36. | ಸ್ಪೆಷಲ್ ಮೈಸೂರು ಪಾಕ್ | 50 ಗ್ರಾಂ | 35.00 | |
| 37. | ವಿವಿಧ ಬಗೆಯ ಬರ್ಫಿ | 40 ಗ್ರಾಂ | 40.00 | |
| 38. | ಜಾಮೂನ್ / ಡ್ರೈಜಾಮೂನ್ | 50 ಗ್ರಾಂ | 30.00 | |
| 39. | ರಸ್‌ಮಲೈ/ಬಾಸುಂದಿ | 1 ಸಂಖ್ಯೆ | 35.00 | |
| 40. | ಕ್ಯಾಶಿವ್‌ನಟ್– 10 ಸಂಖ್ಯೆ | 1 ಪ್ಲೇಟ್ | 40.00 | |
| 41. | ಬಿಸ್ಕತ್ (ಕುಕೀಸ್)– 6 ಸಂಖ್ಯೆ | 1 ಪ್ಲೇಟ್ | 30.00 | |
| 42. | ಆಲೂಗಡ್ಡೆ/ ಬಾಳೆಹಣ್ಣು ಚಿಪ್ಸ್ | 25 ಗ್ರಾಂ | 10.00 | |
| 43. | ಪ್ಲಮ್ / ಫ್ರೂಟ್‌ಕೇಕ್ | 40 ಗ್ರಾಂ | 25.00 | |
| 44. | ಬಾದಾಮಿ ಹಲ್ವಾ | 40 ಗ್ರಾಂ | 40.00 | |
| 45. | ಸ್ಪೆಷಲ್‌ಕೇಕ್ | 50 ಗ್ರಾಂ | 45.00 | |
| 46. | 1ಲೀಟರ್ ವಾಟರ್ ಬಾಟಲ್ | – | 25.00 | |
| 47. | 1/2 ಲೀಟರ್ ವಾಟರ್ ಬಾಟಲ್ | – | 12.00 | |
| 48. | 300 ಎಂ.ಎಲ್ ವಾಟರ್ ಬಾಟಲ್ | – | 09.00 | |

**ವಿಶೇಷ ಸೂಚನೆ:**

1. **ದಕ್ಷಿಣ ಭಾರತ ಪ್ಲೇಟ್ ಊಟ–** ಅನ್ನ, 3 ಸಣ್ಣ ಪೂರಿ/1 ಚಪಾತಿ, ರಸಂ, ಸಾಂಬಾರ್, ಮೊಸರು/ಮಜ್ಜಿಗೆ, ತರಕಾರಿ ಪಲ್ಯ, ಹಪ್ಪಳ, ಉಪ್ಪಿನಕಾಯಿ ಇರತಕ್ಕದ್ದು.
2. **ಉತ್ತರ ಭಾರತ ಪ್ಲೇಟ್ ಊಟ–** ರೋಟಿ, ಪಲಾವ್/ಗೀ ರೈಸ್, 2 ವಿಧದಕರಿ, 1 ಸ್ವೀಟ್, ಮೊಸರುಅನ್ನ, ಸಣ್ಣಕಪ್‌ಸೂಪ್‌ಇರತಕ್ಕದ್ದು.
3. ಕೂಲ್‌ಡ್ರಿಂಕ್ಸ್, ನೀರಿನ ಬಾಟಲ್ ಸೇರಿದಂತೆ ಪ್ರತಿಷ್ಠಿತ ಕಂಪನಿಯ ಇತರೆ ಉತ್ಪನ್ನಗಳನ್ನು **ಗರಿಷ್ಠ ಮಾರಾಟ ಬೆಲೆಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುವಂತಿಲ್ಲ.**
4. **ಶಾಸಕರ ಭವನದ ಕೊಠಡಿಗಳಿಗೆ ಪೂರೈಸುವ ಆಹಾರ ಪದಾರ್ಥಗಳಿಗೆ ಒಂದು ಬಾರಿಯ ಸೇವೆಗೆ ರೂ.10ರಂತೆ ಸೇವಾ ಶುಲ್ಕವನ್ನು ಹೆಚ್ಚುವರಿಯಾಗಿ ಪಡೆಯಬಹುದು.**
5. **ಶಾಸಕರ ಭವನ, ವಿಧಾನ ಸೌಧ, ವಿಕಾಸ ಸೌಧಗಳಲ್ಲಿ ನಡೆಯುವ ಸಭೆ/ ಸಮಾರಂಭಗಳಿಗೆ ಸರಬರಾಜು ಮಾಡುವ ಆಹಾರ ಪದಾರ್ಥಗಳ ಬೆಲೆಯನ್ನು ನಮೂದಿಸಿರುವ ದರಕ್ಕಿಂತ ರೂ.10/– ಗಳನ್ನು (ಪ್ಲೇಟ್ ಒಂದಕ್ಕೆ) ಪಡೆಯಬಹುದು.**

## ಅನುಬಂಧ–2

| ಕ್ರಮ ಸಂಖ್ಯೆ | ಸಾಮಾಗ್ರಿಗಳ ಹೆಸರು | ವಸ್ತುಗಳ ಸಂಖ್ಯೆ |
|---|---|---|
| 1. | ಸೀಲಿಂಗ್ ಫ್ಯಾನ್‌ಗಳು (48 ಇಂಚಿನ ಅಳತೆಯುಳ್ಳದ್ದು) | 18 |
| 2. | ಗ್ರಾನೈಟ್ ಸ್ಲ್ಯಾಬ್(Round Standing Table) | 09 |
| 3. | ಗ್ರಾನೈಟ್ ಸ್ಲ್ಯಾಬ್(Eating Table- 6 seater) | 16 |
| 4. | ಗ್ರಾನೈಟ್ ಸ್ಲ್ಯಾಬ್(Eating Table- 4 seater) | 04 |
| 5. | ಡಿಪ್ಲೋಮ್ಯಾಟ್ ಚೇರ್ | 26 |
| 6. | ನೀರಿನ ಆರ್.ಓ. ಪ್ಲಾಂಟ್ | 01 ಸೆಟ್ |
| | ಸ್ಟೀಮ್ ಬಾಯ್ಲರ್ ಮತ್ತು ಉಪಕರಣಗಳು | |
| 7. | ಚಿಮ್ನಿ | 01 ಸೆಟ್ |
| 8. | ಸ್ಟೇನ್‌ಲೆಸ್ ಸ್ಟೀಲ್ ಸ್ಟ್ಯಾಂಡಿಂಗ್, ಜೋಡಿಸಿದ ಹಾಗೂ ಟಿಲ್ಟಿಂಗ್ ಸೌಲಭ್ಯ, ಡ್ರೈನೌಟ್ ವಾಲ್ವಗಳನೊಳ್ಳಗೊಂಡ 18 ಗೇಜಿನ ಸ್ಟೇನ್‌ಲೆಸ್ ಸ್ಟೀಲ್ ನಿಂದ ಮಾಡಿರುವ 2 ಕವಚಗಳಿರುವ 40ಲೀ. ಸಾಮರ್ಥ್ಯದ ಪಾತ್ರೆ | 01 ಸೆಟ್ |
| 9. | 6 Stainless steel Plate and 4 Aluminium Plate 2 chambers with 18 gauge 96 idli plant | 01 ಸೆಟ್ |
| 10. | Stainless Steel Stand idli plant | 01 |
| 11. | 1USOAAS 48X15X30 ಅಳತೆಯಿರುವ 15ಲೀ. ಸಾಮರ್ಥ್ಯದ 2 ಕಂಟೈನರ್ ಗಳ್ಳುಳ್ಳ ಇಡ್ಲಿ ವರ್ಕ ಟೇಬಲ್ | 01 |
| 12. | ಗ್ಯಾಸ್ ಫೈರ್ಡ್ ಸ್ಟೀಮ್ ಜನರೇಟರ್ | 02 |
| 13. | Gas cylinders | 12 |
| 14. | Exhaust Fans | 05+01 |
| 15. | 18 ಗೇಜಿನ ಸ್ಟೇನ್‌ಲೆಸ್ ಸ್ಟೀಲ್‌ನಿಂದ ಮಾಡಿರುವ 30 ಲೀ. ಸಾಮರ್ಥ್ಯದ ನೀರು ಕುದಿಸುವ ಪಾತ್ರೆ, ಸ್ಟೇನ್‌ಲೆಸ್ ಸ್ಟ್ಯಾಂಡಿಂಗ್ ಜೋಡಿಸಿರುವ ಹಾಗೂ ಟೆಲ್ಟಿಂಗ್ ಸೌಲಭ್ಯ ಹಾಗೂ ಡ್ರೈಯರ್ ಔಟ್ ವಾಲ್ಟ್‌ಗಳನೊಳ್ಳಗೊಂಡ 18 ಗೇಜಿನ ಸ್ಟೇನ್‌ಲೆಸ್ ಮಾಡಿರುವ 5 ಕೆ.ಜಿ. ಸಾಮರ್ಥ್ಯದ ಅಕ್ಕಿ ತರಕಾರಿ ಸಾಂಬಾರುಗಳನ್ನು ಬೇಯಿಸುವ ಪಾತ್ರೆ | 01 |
| 16. | M.S. Stand Single Inner Container, Deep steriliser | 01 |
| 17. | Sweets Steel Showcase | 01 |
| 18. | M.S. Chairs | 48 |
| 19. | Dosa Tawa(54X30X34mm) | 01 |
| 20. | Dosa Side Table with one undershelf (24X30X34mm) | 01 |
| 21. | Idli working table with tray shelves (24X34X34mm) | 01 |

| | | |
|---|---|---|
| 22. | 5 Hole hot case with double Jacket (60X15X34mm) | 03 |
| 23. | SS Coffee Counter (size 72X26X34mm) | 01 |
| 24. | Drinking Water Unit (100 Hot & 100 Normal) Emersion (kirloskar) 200 Ltrs | 01 |
| 25. | Spoon Sterilizer (4 Compartment) | 01 |
| 26. | Rice Vessels (steam) (20kg) | 01 |
| 27. | 2 Burner North Cooking Range (size 48x24x28+18mm) | 01 |
| 28. | 2 Burner South Cooking Range (size 48x24x28mm) | 01 |
| 29. | Single Burner North Cooking Range (size 24x24x28+18mm) | 01 |
| 30. | Single Burner South Cooking Range (size 24x24x28mm) | 02 |
| 31. | Three Door Freezer | 01 |
| 32. | Tilting Grinder (Vijayalakshmi) (20ltr) | 01 |
| 33. | Open Type Grinder (20ltrs) (old Rep) | 02 |
| 34. | Standing Grinder | 01 |